ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 719
ಸದಸ್ಯರ ಹೆಸರು : ಶ್ರೀ ಎಸ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : **20.12.2021**
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ವಿದ್ಯಾ ವಿಕಾಸ ಯೋಜನೆಯ ಅನ್ವಯ ಕಳೆದ ಎರಡು ವರ್ಷಗಳಲ್ಲಿ ಯಾವ ಯಾವ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ;	ವಿದ್ಯಾವಿಕಾಸ ಯೋಜನೆಯನ್ವಯ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗಿದೆ. ❖ **2019-20ನೇ** ಸಾಲಿನಲ್ಲಿ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗಿದೆ. • **ಪಠ್ಯ ಪುಸ್ತಕ** (1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ). • **ಉಚಿತ ಸಮವಸ್ತ್ರ** (1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ). • **ಬೈಸಿಕಲ್**(8ನೇ ತರಗತಿಯ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ) • **ಶೂ ಮತ್ತು ಸಾಕ್ಸ್**(1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ) ❖ **2020-21ನೇ** ಸಾಲಿನಲ್ಲಿ ಈ ಕೆಳಗಿನ ಸೌಲಭ್ಯಗಳನ್ನು ನೀಡಲಾಗಿದೆ. • **ಪಠ್ಯ ಪುಸ್ತಕ** (1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ) • **ಉಚಿತ ಸಮವಸ್ತ್ರ** (1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ)
ಆ)	2020-21ರ ಶೈಕ್ಷಣಿಕ ಅವಧಿಯಲ್ಲಿ ಶಿಕ್ಷಣ ಸಂಸ್ಥೆಗಳ ಕರೋನಾ ಕಾರಣದಿಂದ ತೆರೆಯದಿದ್ದರೂ 2020 ಡಿಸಂಬರ್ ವರೆಗೆ ರೂ.12,259.00 ಲಕ್ಷಗಳನ್ನು ಖರ್ಚು ಮಾಡಿ ಸರ್ಕಾರದ ವತಿಯಿಂದ ವಿದ್ಯಾರ್ಥಿಗಳಿಗೆ ನೀಡಲಾದ ಸೌಲಭ್ಯಗಳಾವುವು; (ಸಮಗ್ರ ಮಾಹಿತಿ ನೀಡುವುದು)	2020-21ರ ಶೈಕ್ಷಣಿಕ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ನೀಡಲಾದ ಪಠ್ಯ ಪುಸ್ತಕ ಹಾಗೂ ಸಮವಸ್ತ್ರ ಸರಬರಾಜು ಸೌಲಭ್ಯಗಳ ಸಮಗ್ರ ಮಾಹಿತಿ ಕೆಳಗಿನಂತಿದೆ. ಪಠ್ಯ ಪುಸ್ತಕ: 2020-21ನೇ ಶೈಕ್ಷಣಿಕ ಸಾಲಿನಲ್ಲಿ 1 ರಿಂದ 10ನೇ ತರಗತಿಯ ಪಠ್ಯಪುಸ್ತಕಗಳು, 4 ರಿಂದ 9ನೇ ತರಗತಿಯ ಅಭ್ಯಾಸ ಪುಸ್ತಕಗಳು ಹಾಗೂ 1 ರಿಂದ 12ನೇ ತರಗತಿಯ ಶಾಲಾ ದಿನಚರಿಗಳನ್ನು ಉಚಿತವಾಗಿ ಮುದ್ರಣಗೊಳಿಸಿ ಸರಬರಾಜು ಮಾಡಿರುವ ಸಂಬಂಧ ರೂ.169.41.50,112/- (ನೂರ ಅರವತ್ತೊಂಭತ್ತು ಕೋಟಿ ನಲವತ್ತೊಂದು ಲಕ್ಷದ ಐವತ್ತು ಸಾವಿರದ ನೂರ ಹನ್ನೆರಡು ರೂ.ಗಳು ಮಾತ್ರ) ವೆಚ್ಚ ಭರಿಸಲಾಗಿರುತ್ತದೆ.

		ಉಚಿತ ಸಮವಸ್ತ್ರ : 2020-21ನೇ ಶೈಕ್ಷಣಿಕ ಸಾಲಿನಲ್ಲಿ 1 ರಿಂದ 10ನೇ ತರಗತಿಯ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಸಮವಸ್ತ್ರ ಖರೀದಿಗಾಗಿ ರೂ.77.17 ಕೋಟಿ (ರೂ.ಎಪ್ಪತ್ತೇಳು ಕೋಟಿ ಹದಿನೇಳು ಲಕ್ಷ ಮಾತ್ರ) ವೆಚ್ಚ ಮಾಡಲಾಗಿರುತ್ತದೆ.
ಇ)	2020-21ರ ಶೈಕ್ಷಣಿಕ ವರ್ಷ ಯಾವಾಗಿನಿಂದ ಪ್ರಾರಂಭವಾಯಿತು: ವಿದ್ಯಾರ್ಥಿಗಳು ಶಾಲೆಗೆ ಯಾವ ದಿನಾಂಕದಿಂದ ಬರಲು ಪ್ರಾರಂಭಿಸಿದರು?	2020-21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕೋವಿಡ್-19ರ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಕಾಲ ಕಾಲಕ್ಕೆ ಹೊರಡಿಸಲಾದ ಕೋವಿಡ್-19 ರ ಮಾರ್ಗಸೂಚಿಯನ್ವಯ ಹಂತ ಹಂತವಾಗಿ ಈ ಕೆಳಕಂಡ ವೇಳಾಪಟ್ಟಿಯಂತೆ ಶಾಲೆಗಳನ್ನು ಪ್ರಾರಂಭಿಸಲಾಗಿರುತ್ತದೆ. • ದಿನಾಂಕ:04-08-2020 ರಿಂದ 10-10-2020 "ವಿದ್ಯಾಗಮ" ಕಾರ್ಯಕ್ರಮವನ್ನು ನಡೆಸಲಾಗಿದೆ. • ದಿನಾಂಕ:01/01/2021 ರಿಂದ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ 10ನೇ ತರಗತಿಗಳನ್ನು ವಿದ್ಯಾರ್ಥಿಗಳಿಗೆ ಪ್ರತಿದಿನ ಪೂರ್ವಾಹ್ನ 10.00 ರಿಂದ 12.30 ವರೆಗೆ ಶಾಲೆ ನಡೆಸಲಾಗಿದೆ. 6 ರಿಂದ 9ನೇ ತರಗತಿ ವಿದ್ಯಾಗಮ ಕಾರ್ಯಕ್ರಮ ನಡೆಸಲಾಗಿದೆ • ದಿನಾಂಕ:01/02/2021 ರಿಂದ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ 9 ಮತ್ತು 10ನೇ ತರಗತಿಗಳ ವಿದ್ಯಾರ್ಥಿಗಳಿಗೆ ಪ್ರತಿದಿನ ಪೂರ್ಣಾವಧಿ ಶಾಲೆ ನಡೆಸಲಾಗಿದೆ ಹಾಗೂ 6 ರಿಂದ 8ನೇ ತರಗತಿ ವಿದ್ಯಾಗಮ ಕಾರ್ಯಕ್ರಮ ನಡೆಸಲಾಗಿದೆ. • ದಿ:22/02/2021 ರಿಂದ ರಾಜ್ಯದಲ್ಲಿನ ಬಿಬಿಎಂಪಿ ವ್ಯಾಪ್ತಿ ಮತ್ತು ಕೇರಳ ರಾಜ್ಯಕ್ಕೆ ಗಡಿಭಾಗ ಹೊಂದಿಕೊಂಡಿರುವ ಪ್ರದೇಶಗಳಲ್ಲಿ 8ನೇ ತರಗತಿ ಮಾತ್ರ ಪೂರ್ಣಾವಧಿ ಶಾಲೆ ಪ್ರಾರಂಭಿಸಿ 6 ಮತ್ತು 7ನೇ ತರಗತಿಗೆ ವಿದ್ಯಾಗಮ ಕಾರ್ಯಕ್ರಮ ನಡೆಸಲಾಗಿದೆ. ಉಳಿದೆಲ್ಲಾ ಕಡೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ 6 ರಿಂದ 8ನೇ ತರಗತಿಗಳಿಗೆ ಪ್ರತಿದಿನ ಪೂರ್ಣಾವಧಿ ಶಾಲೆ ನಡೆಸಲಾಗಿದೆ. • ದಿ:03/02/2021 ರಿಂದ ದಿ:26/04/2021ವರೆಗೆ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ 6 ರಿಂದ 10ನೇ ತರಗತಿಗಳನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸಲಾಗಿರುತ್ತದೆ.

ಇಪಿ: 56 ಎಂಪಿಇ 2021

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು